ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಾಖೆ / ವಿಷಯ : DEPARTMENT / SUBJECT: [illegible]

ತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ   ದಿನಾಂಕ : DATE : 18/4/2021

# ಕಾರವಾರದ ಕಾರ್ತಿಕ್ ಪಿಎಂ ಕಚೇರಿ ಡೆಪ್ಯುಟಿ ಸೆಕ್ರೆಟರಿ

ಕಾರವಾರ: ಕಾರವಾರದ ಡಾ| ಕಾರ್ತಿಕ ಹೆಗಡೆಕಟ್ಟೆ ಪ್ರಧಾನ ಮಂತ್ರಿ ಕಾರ್ಯಾಲಯದಲ್ಲಿ ಭಾರತ ಸರ್ಕಾರದ ಡೆಪ್ಯುಟಿ ಸೆಕ್ರೆಟರಿ ಹುದ್ದೆಗೆ ಪದೋನ್ನತಿ ಪಡೆದಿದ್ದಾರೆ.

ಸಿಬ್ಬಂದಿ ಹಾಗೂ ತರಬೇತಿ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ಕಾರ್ತಿಕ ಪ್ರಧಾನಿ ಕಾರ್ಯಾಲಯದ ಅತ್ಯಂತ ಕಿರಿಯ ವಯಸ್ಸಿನ ಡೆಪ್ಯೂಟಿ ಸೆಕ್ರೆಟರಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.



ಡಾ| ಕಾರ್ತಿಕ ಹೆಗಡೆಕಟ್ಟೆ ಕಾರವಾರ ದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಪೂರೈಸಿದ್ದು ಹುಬ್ಬಳ್ಳಿಯಲ್ಲಿ ವೈದ್ಯಕೀಯ ಪದವಿ ಜೊತೆಗೆ ಚಿನ್ನದ ಪದಕ ಪಡೆದಿದ್ದಾರೆ. ನಂತರ ಯುಪಿ ಎಸ್‌ಸಿ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲೇ ಉತ್ತೀರ್ಣರಾಗಿ, ಭಾರತೀಯ ರೈಲು ಸೇವೆಗೆ ಸೇರಿದರು. ಡಾ| ಕಾರ್ತಿಕ ಬ್ಲಾಕ್ ಚೈನ್ ಟೆಕ್ನಾಲಜಿ ಮತ್ತು ಕ್ರಿಪ್ಟೋ ಕರೆನ್ಸಿ ಕ್ಷೇತ್ರದಲ್ಲಿ ಪರಿಣಿತರಾಗಿದ್ದು, ಈ ಕುರಿತು ಅಂತಾರಾಷ್ಟ್ರೀಯ ಪತ್ರಿಕೆಗಳಲ್ಲಿ 48ಕ್ಕೂ ಹೆಚ್ಚು ವೈಜ್ಞಾನಿಕ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ. ಇವರು ಬ್ಲಾಕ್‌ಚೈನ್ ಕುರಿತಂತೆ ಇತರ ವಿಷಯ ಗಳ ಮೇಲೆ ಹತ್ತು ಪುಸ್ತಕಗಳನ್ನು ಮತ್ತು ಒಂದು ವೈಜ್ಞಾನಿಕ ಕಾದಂಬರಿ ಪ್ರಕಟಿಸಿದ್ದಾರೆ. ಬಿಟ್ ಕಾಯಿನ್‌ನಂತಹ ಕ್ರಿಪ್ಟೋ ಕರೆನ್ಸಿಗಳ ನಿಯಂತ್ರಣಕ್ಕಾಗಿ ಕೆ-ನೈ ಪ್ರೊಟೋಕಾಲ್ ಎಂಬ ಸಿಸ್ಟಮ್, ಮಾರ್ಕೆಟ್‌ಗಳಲ್ಲಿ ಅವುಗಳ ಮೇಲೆ ಹಿಡಿತ ಸಾಧಿಸಲು ಕೆ-ವೈ ಇಂಡೆಕ್ಸ್ ಎಂಬ ಸೂಚ್ಯಂಕವನ್ನೂ ಪ್ರಸ್ತುತ ಪಡಿಸಿದ್ದಾರೆ.

ಡಾ| ಕಾರ್ತಿಕ್‌ಗೆ ಮೊದಲಿನಿಂದಲೂ ಕ್ವಿಜ್‌ನಲ್ಲಿ ಬಹಳ ಆಸಕ್ತಿ. ಕ್ವಿಜ್ ಮೇಲೆ ಪುಸ್ತಕಗಳನ್ನೂ ರಚಿಸಿದ್ದಾರೆ. ಶಾಲಾ ದಿನಗಳಿಂದಲೂ ಅವರಿಗೆ ಚೆಸ್ ನಲ್ಲೂ ಪರಿಣತಿ ಇದ್ದು ಕಾಲೇಜಿನಲ್ಲಿ ಚಾಂಪಿಯನ್ ಆಗಿದ್ದರು. ಬ್ಲಾಕ್ ಚೈನ್ ಟೆಕ್ನಾಲಜಿ ಪರಿಣತಿಗಾಗಿ ವಿಶೇಷವಾಗಿ ಪ್ರಧಾನ ಮಂತ್ರಿಗಳ ಕಾರ್ಯಾಲಯಕ್ಕೆ ಕರೆಸಿಕೊಳ್ಳಲಾಗಿತ್ತು. ಅವರು ಪ್ರಧಾನ ಮಂತ್ರಿಗಳ ಕಾರ್ಯಾಲಯದಲ್ಲಿ ಇಎಚ್‌ಆರ್‌ಎಂಎಸ್‌ನ ಮುಖ್ಯಸ್ಥರಿದ್ದು ಸದ್ಯ ಪ್ರಧಾನ ಮಂತ್ರಿಗಳ ಪ್ರತಿಷ್ಠಿತ ಯೋಜನೆಯಾದ ಮಿಶನ್ ಕರ್ಮಯೋಗಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಡಾ| ಕಾರ್ತಿಕ್ ಕಾರವಾರದ ಮೆಡಿಕಲ್ ಕಾಲೇಜಿನ ಆಸ್ಪತ್ರೆಯ ಹೃದಯ ರೋಗ ತಜ್ಞ ಡಾ| ಪಿ.ಪಿ. ಹೆಗಡೆಕಟ್ಟೆ ಮತ್ತು ಸರಸ್ವತಿ ಪುತ್ರ.